ತುಂಬಿಕೊಂಡ ಪಾತಿಚಿಕ್ಕಿ ಬಿಂಜಲು ಕಟ್ಟಿದ ಅಕ್ಕಿ ಬಿಡಿಸಿ ಹುಳ ಹುಡುಕಿ ಪಕ್ಕದಲ್ಲಿದ್ದ ನೀರಿನ ತಟ್ಟೆಯಲ್ಲಿ ಮುಳುಗಿಸುತ್ತಿದ್ದರೂ ಈ ವಿಷಯಕ್ಕೆ ಸಂಬಂಧಿಸಿ ತನ್ನ ಬಾಯಿಯಿಂದ ಒಂದೇ ಒಂದು ಮಾತನ್ನೂ ಸಹ ಜಾರಲು ಬಿಟ್ಟಿರಲಿಲ್ಲ. ತಾನಾಯಿತು, ತನ್ನ ಕೆಲಸವಾಯಿತು, ತೋಟ ಮನೆ ನೋಡಿಕೊಳ್ಳುತ್ತ, ಹಾಸಿಗೆ ಹಿಡಿದ ತನ್ನಪ್ಪನ ಹೇಲು ಉಚ್ಚೆ ಬಳಗುತ್ತಾ ಪಾತಿಚಿಕ್ಕಿ ಆರಾಮಾಗೇ ಇದ್ದಳು.

ಸಾಧ್ಯವಿದ್ದಷ್ಟೂ ರಂಧ್ರಗಳಿಗೆ ನಳಿಗೆ ಚುಚ್ಚಿಸಿಗೊಂಡು ಹಾಸಿಗೆ ಹಿಡಿದ ಗೋಪಾಲಜ್ಜ ಅಂದರೆ ಪಾತಿಚಿಕ್ಕಿಯ ಅಪ್ಪ ಸಾಯಲು ತಿಂಗಳೊಪ್ಪತ್ತಿರುತ್ತಾ ಕಾಕಾ ಮನೆಬಿಟ್ಟಿದ್ದು. ಪಾತಿಚಿಕ್ಕಿ ಚಿಟಬಿಲ್ಲನ್ನು ಹೆದೆಗೇರಿಸಿ ಮಂಗಗಳ ಬೇಟೆಯಾಡಲು ತೋಟಕ್ಕೆ ಹೋಗಿದ್ದರೆ ಇತ್ತ ಕಾಕಾ ತನ್ನಪ್ಪನ ಮನೆಯಿಂದ ತಂದ ಹಡಪ ತುಂಬಿದ ಟ್ರಂಕನ್ನೂ ತೆಗೆದುಕೊಳ್ಳದೆ ಬರೀಗೈಲಿ ಹೊರಟುಬಿಟ್ಟಿದ್ದ. ಕಣ್ಣಾರೆ ಕಂಡಿರಲಿಲ್ಲ, ನಾನಾಗ ಶಾಲೆಯಲ್ಲಿದ್ದೆ... ಅಡುಗೆಗೆ ಬರುತ್ತಿದ್ದ ಮಾದೇವಿ ಊರತುಂಬಾ ವಿಷಯ ಹಬ್ಬಿಸುವಾಗ ಕೇಳಿಸಿಕೊಂಡಿದ್ದೆನಷ್ಟೇ!

ಅಚಾನಕ್ಕಾಗಿ ಎದುರಾದ ಈ ಸನ್ನಿವೇಶವನ್ನು ಊಹಿಸಿರದ ಪಾತಿಚಿಕ್ಕಿ, 'ನಾ ಯಾರಿಗೇನು ಮೋಸ ಮಾಡಿದ್ನರೋ! ಯಾರ ಕೆಟ್ಟ ದೃಷ್ಟಿ ಬಿತ್ತೋ ನನ್ನ ಮೇಲೆ. ನನ್ನ ಜೀವನ ಚಕಣಾ ಚೂರಾಗೋಯ್ತಲ್ರೋ' ಎಂದು ಎದೆ ಬಡಿಕೊಂಡು ಅತ್ತಿದ್ದಳು. ಹಾಸಿಗೆ ಹಿಡಿದಿದ್ದ ಗೋಪಾಲಜ್ಜನೂ ಮುಸಿಮುಸಿ ಮನಸೋ ಇಚ್ಛೆ ಅತ್ತಿದ್ದ. ಮನೆಬಿಟ್ಟು ಹೊಗುವುದೆಂದರೇನು ಎನ್ನುವ ಕಲ್ಪನೆ ನನಗಿನ್ನೂ ಆಗ ಸರಿಯಾಗಿ ಮೂಡಿರಲಿಲ್ಲ. ಆದರೂ ನನ್ನ ತಿಳಿವಳಿಕೆಯ ಮಟ್ಟದಲ್ಲಿ ಪಾತಿಚಿಕ್ಕಿಯ ತೇಗಿನ ಅಬ್ಬರಕ್ಕೇ ಕಾಕಾ ಮನೆಬಿಟ್ಟಿರಬೇಕು ಎಂದು ನಿರ್ಧಾರಕ್ಕೆ ಬಂದಿದ್ದೆ. ಪಾತಿಚಿಕ್ಕಿ ಪದೇಪದೇ ಡರ್‍ರನೆ ತೇಗಿದಳೆಂದರೆ ಅವಳು ಉಂಡ ಅಡುಗೆಯ ವಾಸನೆಯೆಲ್ಲ ಕಲಸುಮೇಲೋಗರದಂತೆ ಒನ್ನಮನಿ ಹೇಸಿಗೆಯ ರೂಪದಲ್ಲಿ ಹೊರಬರುತ್ತಿತ್ತು. ತೇಗಿದರೆ ಹೀಗೆಲ್ಲಾ ವಾಸನೆ ಬರುತ್ತದೆಯೆಂಬ ವಿಚಾರ ನನಗೆ ಹೊಸದು. ಪಾತಿಚಿಕ್ಕಿಯ ಹಿಂದಾದರೂ ಕುಳಿತುಕೊಂಡೇನು ನಾನು, ಆದರೆ ಅವಳ ಮುಂದೆ ಕುಳಿತುಕೊಳ್ಳುವ ಧೈರ್ಯ ಯಾರಿಗೂ ಇದ್ದಿರಲಿಕ್ಕಿಲ್ಲ. ಆದರೆ ನಾನು ಕಂಡುಹಿಡಿದ ಕಾರಣವನ್ನು ಪಾತಿಚಿಕ್ಕಿಗೆ ಹೇಳುವ ಧೈರ್ಯವಾಗಿರಲಿಲ್ಲ ಅಷ್ಟೇ!

ಅದರೆ ಈಗೀಗ ಅನ್ನಿಸುತ್ತದೆ, ಕಾಕ ಬಹಳ ಚಡಪಡಿಸುತ್ತಿದ್ದಿರಬೇಕು. ನೀರಿನಿಂದ ಹೊರ ತೆಗೆದ ಮೀನಿನಂತೆ! ತನ್ನವರನ್ನೆಲ್ಲಾ ಬಿಟ್ಟು ಬದುಕುತ್ತಿದ್ದ ಎನ್ನುವುದಕ್ಕಿಂತಲೂ ಮಿಗಿಲಾಗಿ ತನ್ನನ್ನೇ ಅಡವಿಟ್ಟವರಂತೆ ತಲ್ಲಣಗೊಳ್ಳುತ್ತಿದ್ದನವನು. ಹೆಣ್ಣು ತಾನು ಸೇರಿದ ಮನೆಯನ್ನು, ಹೊಸ ಸಂಬಂಧವನ್ನು ಅಪ್ಪಿಕೊಂಡಷ್ಟು ಸುಲಭವಾಗಿ ಗಂಡಸಿಗೆ ಅದು ಸಾಧ್ಯವಾಗುವುದು ಬಹಳ ಅಪರೂಪ. ಗಂಡಸಿನ ಪ್ರಕೃತಿಗೆ 'ಅಳಿಯ ಸಂತಾನ, ಮನೆ ಅಳಿಯ' ಎಂಬ ಯಾವ ಪದವೂ ಹೊಂದಿಕೆಯಾಗುವುದು ಬಹಳ ಕಷ್ಟವೇ! ನಾನೇ ನೋಡಿಲ್ಲವೇ ಜಗದೀಶನನ್ನು, ಅವನೂ ಹಾಗೆಯೇ, ನನ್ನ ತವರಿಗೆ ಹೋಗಿ ನಾಲ್ಕು ದಿನ ಇದ್ದು ಬರೋಣವೆಂದರೆ ಮಾವನ ಮನೆಯವರೆಲ್ಲಾ ಇವರನ್ನು ಹುರಿದು ಮುಕ್ಕಿಬಿಡುವರೇನೋ ಎಂಬ ಲೆಕ್ಕದಲ್ಲಿ ಬಿಸಿ ಕಾವಲಿಯ ಮೇಲಿನ ನೀರಿನಂತೆ ತಕತಕ ಚಡಪಡಿಸುತ್ತಾನೆ. ಆಗೆಲ್ಲಾ ಕಾಕಾ ನೆನಪಿಗೆ ಬರುತ್ತಾನೆ, ಪಾತಿಚಿಕ್ಕಿ ಸ್ವಲ್ಪ ಮೆತ್ತಗಿದ್ದರೆ ಅವನು ಮನೆಬಿಟ್ಟು ಹೋಗುತ್ತಿರಲಿಲ್ಲವೇನೋ ಎಂದು.

ಚಿಕ್ಕಿ ಕಾಕಾರದ್ದು ಮದುವೆ ಎನ್ನುವುದಕ್ಕಿಂತಲೂ ಅದೊಂದು ವ್ಯಾಪಾರದಂತಿತ್ತು! ಕಾಕಾನ ತಂದೆಯ ಮನೆಯ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಿದ್ದಕ್ಕಾಗಿ ಒತ್ತೆಯಾಳಾಗಿ ಬಂದ ನಂಬರಿಲ್ಲದ ಕೈದಿಯಾಗಿದ್ದ ಅವನು. ಅಥವಾ ಕಾಕಾನನ್ನು ಇನ್ನೂ ನಿಖರವಾಗಿ ವ್ಯಾಖ್ಯಾನಿಸಬೇಕೆಂದರೆ ಅಳಿಯ ಎಂಬುದು ಸಂಬಂಧಕ್ಕೆ ಅಂಟಿಕೊಂಡು ಬಂದ ಅನವಶ್ಯಕ ಹೆಸರಷ್ಟೇ; ವಾಸ್ತವದಲ್ಲಿ ಅವನು ಕೊಂಡು ತಂದ ದುಬಾರಿ ಆಟಿಗೆಯಂತಿದ್ದ. ಕೀಲಿಕೊಟ್ಟರೆ ತಾಳ, ತಿಪ್ಪರಲಾಗ ಹಾಕುವ ಆಟಿಗೆ...